ಮಿತಿಯುಂಟು. ನಿದರ್ಶನಕ್ಕೆ ಉದಾಹರಣೆಯೊಂದನ್ನು ಇಲ್ಲಿ ನೋಡಬಹುದು. ರುಚಿಯಾಗಿದೆ ಎಂದು ಎಷ್ಟು ಊಟವನ್ನು ಮಾಡಲು ಸಾಧ್ಯ. ಯಾವುದೋ ಒಂದು ಹಂತದಲ್ಲಿ ಇನ್ನು ಸಾಕು ಎಂದು ನಾಲಗೆಗೂ ಅನಿಸುವುದು; ಹೊಟ್ಟೆಗೂ ಅನಿಸುವುದು. ರುಚಿಯಾಗಿರುವುದನ್ನು ತಿನ್ನುವುದಷ್ಟೆ ನಾಲಗೆಯ ಗುಣವಾಗಿದ್ದರೆ ಅದಕ್ಕೆ ಎಂದಿಗೂ ಸ್ವಾದಭರಿತ ಭಕ್ಷ್ಯ ಸಾಕು ಎಂದೆನಿಸಬಾರದಿತ್ತು, ಅಲ್ಲವೆ? ಆದರೆ ನಾಲಗೆ ಯಾವುದೋ ಒಂದು ಕ್ಷಣ ರುಚಿಯನ್ನು ಗುರುತಿಸುವುದನ್ನೇ ನಿಲ್ಲಿಸುತ್ತದೆ; 'ನನಗೆ ಸಾಕಾಗಿದೆ, ವಿಶ್ರಾಂತಿ ಬೇಕು' ಎಂದು ಮುಷ್ಕರವನ್ನು ಹೂಡುತ್ತದೆ. ಹೀಗೆಯೇ ಸುಂದರವಾದುದನ್ನು ಕಣ್ಣು ಎಷ್ಟು ಹೊತ್ತು ಎವೆಯಿಕ್ಕದೆ ನೋಡೀತು? ಸೌಂದರ್ಯವೂ ಕಣ್ಣನ್ನು ದಣಿಸುತ್ತದೆ; ಇನ್ನು ನೋಡಲಾಗದು – ಎಂದು ಕಣ್ಣರೆಪ್ಪೆಗಳು ಮುಚ್ಚಿಕೊಳ್ಳುತ್ತವೆ. ಹೀಗೆ ಎಲ್ಲ ಇಂದ್ರಿಯಗಳ ಪಾಡು ಕೂಡ ಇಷ್ಟೇ; ಯಾವುದೋ ಒಂದು ಕ್ಷಣ ಅವು ತಮ್ಮ ಸೋಲನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಆದುದರಿಂದಲೇ ಇಂದ್ರಿಯಗಳ ನಿಗ್ರಹ ಆವಶ್ಯಕ ಎನ್ನುತ್ತಿದೆ ಉಪನಿಷತ್ತು. ದೇವತೆಗಳಿಗೂ ಅವರ ಇಂದ್ರಿಯಗಳ ಚಾಪಲ್ಯವೂ ಗೊತ್ತಿದೆ; ಅದರ ಬೆಲೆಯೂ ಗೊತ್ತಿದೆ. ಹೀಗಾಗಿಯೇ ಪ್ರಜಾಪತಿಯ ಉಪದೇಶವಾದ 'ದ' ಎಂದರೆ 'ದಾಮ್ಯತ' ಎಂದು ತತ್‌ಕ್ಷಣವೇ ತಿಳಿದುಕೊಂಡರು.

ತೃಪ್ತಿಯನ್ನೇ ಕಾಣದ ಜೀವಿಗಳು ಮನುಷ್ಯರು. ಆದುದರಿಂದಲೇ ಅವರಲ್ಲಿ ಕೂಡಿಡುವ ಬುದ್ಧಿ ಹೆಚ್ಚು. ಜಗತ್ತಿನಲ್ಲಿ ಇರುವುದೆಲ್ಲವೂ ಅವನಿಗಾಗಿ ಮಾತ್ರವೇ ಎಂಬಂಥ ಸಂಕುಚಿತ ಮನೋಧರ್ಮ ಅವರದ್ದು. ಈ ಮಾತಿಗೆ ಹೆಚ್ಚಿನ ಸಾಕ್ಷ್ಯಗಳು ಬೇಕಾಗಲಾರವೇನೋ! ಪ್ರಕೃತಿಯ ಮೇಲೆ ಮನುಷ್ಯರು ಮಾಡಿರುವ, ಮಾಡುತ್ತಿರುವ ಶೋಷಣೆಗೆ ಮೂಲವೇ ಈ ಸಂಗ್ರಹಬುದ್ಧಿ. ಹೀಗಾಗಿ 'ದ' ಎಂದರೆ 'ದತ್ತ'– ದಾನ ಮಾಡುವುದು ಎಂದು ತಿಳಿದುಕೊಂಡದ್ದು ಸರಿಯಾಗಿಯೇ ಇದೆ. ದಾನ ಮಾಡುವುದು ಎಂದರೆ ಹಂಚಿಕೊಂಡು ತಿನ್ನುವುದು. ದಾನದ ಬಗ್ಗೆ ನಮ್ಮಲ್ಲಿ ತುಂಬ ಹೇಳಲಾಗಿದೆ. ದಾನ ಹೇಗೆ ಮಾಡಬೇಕು? ಏಕೆ ಮಾಡಬೇಕು? ಯಾರಿಗೆ ಮಾಡಬೇಕು? – ಹೀಗೆಲ್ಲ ತುಂಬ ಜಿಜ್ಞಾಸೆ ನಡೆದಿದೆ. ನಮಗೆ ಬೇಡವಾದುದನ್ನು ಬೇರೆಯವರಿಗೆ ದಾಟಿಸುವುದು ದಾನ ಎಂದೆನಿಸಿಕೊಳ್ಳಲಾರದು. ನಾವು ದಾನವಾಗಿ ಕೊಡುವಂಥದ್ದು ಚೆನ್ನಾಗಿಯೇ ಇರಬೇಕು; ಅದನ್ನು ಸ್ವೀಕರಿಸಿದವರಿಗೆ ಅದು ಪ್ರಯೋಜನಕ್ಕೆ ಬರುವಂತಿರಬೇಕು.

ಜಗತ್ತು ಇರುವುದೇ ಅವಲಂಬನೆಯ ತತ್ತ್ವದ ಮೇಲೆ; ಒಂದು ಇನ್ನೊಂದನ್ನು ಅವಲಂಬಿಸಿರುತ್ತದೆ. ಈ ಆಲಂಬನವೇನೂ ಅಪಮಾನಕಾರಿಯಾದುದಲ್ಲ. ಈ ಪರಸ್ಪರ ಅವಲಂಬನೆಯೇ ಇಡಿಯ ವಿಶ್ವವನ್ನು ಏಕಸೂತ್ರದಲ್ಲಿ ಪೋಣಿಸಿರುವುದು. ಇನ್ನೊಬ್ಬನಿಗೆ ಸೇರಬೇಕಾದುದದನ್ನು ನಾವೇ ದುರಾಸೆಯಿಂದ ಸಂಗ್ರಹಿಸಿಟ್ಟುಕೊಳ್ಳುವ ಬುದ್ಧಿಯೇ 'ಲೋಭ' ಎಂದೆನಿಸಿಕೊಳ್ಳುತ್ತದೆ. ಎಲ್ಲರೂ ಲೋಭದಿಂದಲೇ ನಡೆದುಕೊಂಡರೆ ಜಗತ್ತಿನ ವ್ಯವಹಾರ ಏರುಪೇರಾಗುತ್ತದೆ. ನಮ್ಮ ಪರಿಸರವನ್ನು ಒಮ್ಮೆ ಅವಲೋಕಿಸಿದರೂ ಸಾಕು, ಜಗತ್ತು ಹೇಗೆ ದಾನಬುದ್ಧಿಯಿಂದಲೇ ಬದುಕಿರುವುದು ಎನ್ನುವುದು ಮನದಟ್ಟಾಗುತ್ತದೆ. ಭೂಮಿಯಲ್ಲಿ ಇಂಗಿದ ನೀರನ್ನು ಅದು ತನ್ನಲ್ಲಿಯೇ ಬಚ್ಚಿಟ್ಟುಕೊಂಡರೆ ನಮ್ಮ ಪರಿಸ್ಥಿತಿ ಏನಾಗಬಹುದು? ಮೋಡಗಳು ನೀರನ್ನು ಸಂಗ್ರಹಿಸುವುದರಲ್ಲಿಯೇ ಮುಳುಗಿ ಮಳೆಗರೆಯುವುದನ್ನೇ ಮರೆತರೆ? ತನ್ನಲ್ಲಿ ಬೆಳೆದ ಹಣ್ಣು ತನಗಷ್ಟೇ ಸೇರಬೇಕು ಎಂದು ಹಣ್ಣಿನ ಮರವೇನಾದರೂ ಹಟ ಮಾಡಿದರೆ? ಪ್ರಕೃತಿಯಲ್ಲಿ ಸಹಜವಾಗಿರುವ ವಿತರಣಶೀಲತೆಯ ಅಡಿಪಾಯದ ಮೇಲೆ